ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ"
ಶಾಂತಿನಗರ, ಬೆಂಗಳೂರು-೫೬೦ ೦೨೭.
ದೂರವಾಣಿ ಸಂಖ್ಯೆ : ೦೮೦-೨೨೨೨೧೩೨೧

**Karnataka State Road Transport Corporation**
"Transport House"
Shanthinagar, Bengaluru-560027
Tel : 080-22221321

**ಸಂ:ಕರಾಸಾ/ಕೇಂಕ/ಸಂ/ಸಾಮಾನ್ಯ/ 5843 /17** **ದಿನಾಂಕ: 21 /12/2017**

# ಸುತ್ತೋಲೆ

ಸಾರಿಗೆ ಸಂ... 1585 ... 22/12/18 ... ಬೆಂಗಳೂ...

ವಿಷಯ:-ಶಾಲಾ ಮಕ್ಕಳನ್ನು ಸಾರಿಗೆ ವಾಹನಗಳಲ್ಲಿ ಹತ್ತಿಸಿಕೊಳ್ಳದಿರುವುದು ಹಾಗೂ ಕೈತೋರಿಸಿದರೂ ವಾಹನವನ್ನು ನಿಲ್ಲಿಸದಿರುವುದರಿಂದ ಮಕ್ಕಳಿಗೆ ಉಂಟಾಗುತ್ತಿರುವ ತೊಂದರೆ ಕುರಿತು – ಕ್ರಮಕೈಗೊಳ್ಳುವ ಬಗ್ಗೆ.
ಉಲ್ಲೇಖ:-ನಂ:934/17, ದಿನಾಂಕ:12.12.2017.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:18.12.2017ರಂದು ಅಧ್ಯಕ್ಷರು, ರಾಜ್ಯ ಮಕ್ಕಳ ಹಕ್ಕುಗಳ ಆಯೋಗ, ಬೆಂಗಳೂರು ಇವರ ಕಛೇರಿಯಲ್ಲಿ [ಅಧ್ಯಕ್ಷರವರ ಅಧ್ಯಕ್ಷತೆಯಲ್ಲಿ] ರಾಜ್ಯದಾದ್ಯಂತ ಮಕ್ಕಳ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಸರ್ಕಾರದ ವಿವಿಧ ಇಲಾಖಾ ಮುಖ್ಯಸ್ಥರ ಸಭೆಯನ್ನು ಆಯೋಜಿಸಲಾಗಿತ್ತು. ಅದರಂತೆ, ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸಲು ಬಸ್ಸು ಪಾಸುಗಳನ್ನು ಪಡೆದಿರುವ ಶಾಲಾ ಮಕ್ಕಳನ್ನು ಹತ್ತಿಸಿಕೊಳ್ಳಲು ಹಾಗೂ ಇಳಿಸಲು ನಿಗದಿತ ಸ್ಥಳಗಳಲ್ಲಿ ಬಸ್ಸುಗಳನ್ನು ಕೈತೋರಿಸಿದರೂ ಸಹ ನಿಲ್ಲಿಸದಿರುವ ಬಗ್ಗೆ ಮತ್ತು ವಾಹನಗಳಲ್ಲಿ ಆಸನಗಳು ಖಾಲಿ ಇದ್ದರೂ ಸಹ ಮಕ್ಕಳಿಗೆ ಕುಳಿತುಕೊಳ್ಳಲು ಅವಕಾಶ ಮಾಡಿಕೊಡದಿರುವುದು ಹಾಗೂ ಇತರೇ ಸಾರ್ವಜನಿಕ ಪ್ರಯಾಣಿಕರು ಬಸ್ಸಿಗೆ ಹತ್ತಿದಾಗ ಅವರಿಗೆ ಸ್ಥಳಾವಕಾಶ ಒದಗಿಸಿಕೊಡುವ ನಿಟ್ಟಿನಲ್ಲಿ ಆಸನದಲ್ಲಿ ಕುಳಿತಿರುವ ಮಕ್ಕಳನ್ನು ಕಡ್ಡಾಯವಾಗಿ ಎದ್ದು ನಿಲ್ಲಿಸುತ್ತಿರುವ ಬಗ್ಗೆ ಮತ್ತು ಪ್ರಯಾಣದ ಸಮಯದಲ್ಲಿ ಮಕ್ಕಳಿಗೆ ಅನಗತ್ಯವಾಗಿ ಚಾಲನಾ ಸಿಬ್ಬಂದಿ ನಾನಾ ರೀತಿಯ ಕಿರುಕುಳ ನೀಡುತ್ತಿರುವ ಕಾರಣ ಮಕ್ಕಳು ಮನೆಯಿಂದ ಶಾಲೆಗೆ ತೆರಳಿ ಪುನಃ ಶಾಲೆಯಿಂದ ಮನೆಗೆ ಬರುವ ವೇಳೆಯಲ್ಲಿ ತೀವ್ರ ತೊಂದರೆ ಅನುಭವಿಸುತ್ತಿರುವ ವಿಚಾರವನ್ನು ಆಯೋಗದ ಅಧ್ಯಕ್ಷರು ಅತ್ಯಂತ ಗಂಭೀರವಾಗಿ ಪರಿಗಣಿಸಿರುತ್ತಾರೆ. ಈ ನಿಟ್ಟಿನಲ್ಲಿ ಪ್ರಯಾಣದ ವೇಳೆ ಶಾಲಾ ಮಕ್ಕಳಿಗೆ ತೊಂದರೆಯಾದಂತೆ ಮತ್ತು ದೂರುಗಳಿಗೆ ಅವಕಾಶವಾಗದಂತೆ ಕ್ರಮವಹಿಸಲು ಸಂಬಂಧಪಟ್ಟವರಿಗೆ ಅಗತ್ಯ ಸಲಹೆ/ಸೂಚನೆ ನೀಡುವಂತೆ ನಿರ್ದೇಶವನ್ನು ಸಹ ನೀಡಿರುತ್ತಾರೆ.

ಆದಕಾರಣ, ಸದರಿ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಮಕ್ಕಳ ಹಿತ ಮತ್ತು ಅವರ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲು ಮತ್ತು ಪ್ರಯಾಣದ ವೇಳೆಯಲ್ಲಿ ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ವೈಯಕ್ತಿಕ ಗಮನಹರಿಸುವುದು ಸಂಬಂಧಪಟ್ಟ ಎಲ್ಲಾ ಚಾಲನಾ ಸಿಬ್ಬಂದಿಯವರ ಸಾಮಾಜಿಕ ಜವಾಬ್ದಾರಿ ಹಾಗೂ ಆದ್ಯ ಕರ್ತವ್ಯವಾಗಿರುತ್ತದೆ. ಆದುದರಿಂದ, ಈ ಕುರಿತು ಎಲ್ಲಾ ಘಟಕ ವ್ಯವಸ್ಥಾಪಕರು, ಸಂಚಾರ ಸಹಾಯಕರು, ಬಸ್ಸು ನಿಲ್ದಾಣ, ನಿಯಂತ್ರಣ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ಸಿಬ್ಬಂದಿ ಮತ್ತು ಅದರಲ್ಲಿಯೂ ಪ್ರಮುಖವಾಗಿ ಚಾಲನಾ ಸಿಬ್ಬಂದಿಯವರಿಗೆ ಸದರಿ ವಿಚಾರದ ಗಂಭೀರತೆಯನ್ನು ಕಾಲ ಕಾಲಕ್ಕೆ ತಿಳಿಸುವುದು. ಮುಂದುವರೆದಂತೆ, ಕನಿಷ್ಠ 3 ತಿಂಗಳಿಗೊಮ್ಮೆ ಆಯಾ ಘಟಕ ಮಟ್ಟದಲ್ಲಿ ಸರ್ಕಾರಿ ಶಾಲಾ ಮಕ್ಕಳ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಂಡು ಮಕ್ಕಳಿಂದ ಮಾಹಿತಿಯನ್ನು ಪಡೆದುಕೊಂಡು ಅವರಿಗೆ ಉಂಟಾಗುತ್ತಿರುವ ತೊಂದರೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಕ್ರಮವಹಿಸುವುದು.

ಈ ನಿಟ್ಟಿನಲ್ಲಿ ಶಾಲಾ ವಿದ್ಯಾರ್ಥಿಗಳು, ಪೋಷಕರು ಅಥವಾ ಶಾಲಾ ಆಡಳಿತ ಮಂಡಳಿಯಿಂದ ದೂರುಗಳು ಬಂದಲ್ಲಿ ಅಂತಹ ಚಾಲನಾ ಸಿಬ್ಬಂದಿಯವರ ವಿರುದ್ಧ ನಿಗಮದ ನಿಯಮಗಳನ್ವಯ ಸೂಕ್ತ ಶಿಸ್ತಿನ ಕ್ರಮವನ್ನು ತಪ್ಪದೇ ಜರುಗಿಸುವುದು ಹಾಗೂ ಈ ಬಗ್ಗೆ ಪ್ರತ್ಯೇಕ ದಾಖಲಾತಿ ನಿರ್ವಹಿಸುವುದು.

ಪ್ರಧಾನ ವ್ಯವಸ್ಥಾಪಕರು (ಸಂಚಾರ)

Sandhya

**ಪ್ರತಿಯನ್ನು:** ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ), ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

**ಪ್ರತಿಯನ್ನು:** ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ

**ಪ್ರತಿಯನ್ನು:** ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:** ಹಿರಿಯ/ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಭ:ಜಾ)/ ನಿರ್ದೇಶಕರು(ಸಿ:ಪ) ರವರ ಮಾಹಿತಿಗಾಗಿ.

**ಪ್ರತಿಯನ್ನು:** ಆಪ್ತ ಕಾರ್ಯದರ್ಶಿ/ವಿಶೇಷ ಕರ್ತವ್ಯಾಧಿಕಾರಿ, ಅಧ್ಯಕ್ಷರು, ಉಪಾಧ್ಯಕ್ಷರು ರವರ ಮಾಹಿತಿಗಾಗಿ.